ಬಿ.ಆರ್. ಉಷಾ, ಬೆಂಗಳೂರು
ಹೆಂಗಸರಿಗೆ ಬಂಗಾರ ಇಷ್ಟ; ಗಂಡಸರಿಗೆ ಬಾರ್ ಇಷ್ಟ. ನಿಮಗೆ?



ಚಾಕೋಬಾರ್.

ಎನ್.ಎಸ್. ಚಂದ್ರಶೇಖರ್, ಬೆಂಗಳೂರು
ನನ್ನ ಯಾವುದೇ ಪ್ರಶ್ನೆಗೂ ಉತ್ತರವಿಲ್ಲ. ನನ್ನ ಪ್ರಶ್ನೆ ಪ್ರಶ್ನೆಯಲ್ಲವೇ?
ಪ್ರಶ್ನೆಸಾಗರದಲ್ಲಿ ಒಂದು ಹಿಡಿ ಮುತ್ತು ನಾಪತ್ತೆಯಾಗುವುದು ಸಹಜ.

ಅಶೋಕ ಆರ್. ಹಾಲಣ್ಣವರ, ಲಕ್ಷ್ಮೇಶ್ವರ
ಇಲ್ಲೊಬ್ಬರು ಆದದ್ದೆಲ್ಲಾ ಒಳ್ಳೆಯದಕ್ಕೆ ಅಂತಿದ್ದಾರೆ...?
'ನಿಮ್ಮ ಬಿಳಿ ಶರ್ಟ್ ಮೇಲೆ ಕಾಫಿ ಚೆಲ್ಲಿದೆ' ಅನ್ನಿ. ನಿಜ ಬಣ್ಣ ತಿಳಿಯುತ್ತದೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಸಮಾಜ ಸುಧಾರಕರೆಂದರೆ ಹೇಗಿರಬೇಕು?
ಸಾಮಾಜಿಕ ಸಮಸ್ಯೆಗಳೊಡನೆ ಏಗಿರಬೇಕು.

ವಿ. ಹೇಮಂತಕುಮಾರ್, ಬೆಂಗಳೂರು
ವಾರೆ ನೋಟದಿಂದಲೇ ಕೊಲ್ಲುತ್ತಿದ್ದಾಳಲ್ಲಾ...?



ಅತ್ತ ನೋಡದಿದ್ದರಾಯ್ತು... ನಿಮಗೆ ಖುದ್‌ಕುಷಿಯಲ್ಲೇ ಖುಷಿ ಸಿಗುತ್ತಿದೆ!

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಹಸಿದ ಹೆಣ್ಣು ಹಸಿದ ಗಂಡಿನೊಡನೆ ಮಲಗಿದರೆ ಭಿಕಾರಿ ಹುಟ್ಟುವನಂತೆ. ಮುಂದೆ ಅವನೇ ಕೋಟ್ಯಧಿಪತಿ ಆಗಬಹುದಲ್ಲವೆ?
ಯಶದ ಹಸಿವು ತೀವ್ರವಾಗಿದ್ದರೆ ಮಾತ್ರ.

ಸಿಹಿಮೊಗೆ ರಮೇಶ್, ಮೈಸೂರು
ಕನ್ನಡ ಭಾಷೆಯ ಬಗ್ಗೆ ಜಾಗೃತಿ ಮಾಡಿಸುವ ಹೆಸರಿನಲ್ಲಿ ಹಣ ಸಂಪಾದನೆಯ ದಂಧೆ ನಡೆದಿದೆಯಲ್ಲಾ...?
'ಸ್ವರ' ಎತ್ತಿದರೆ ಕೇಳಿದ 'ವ್ಯಂಜನ'ಗಳನ್ನು 'ಅಲ್ಪಪ್ರಾಣ'ಗಳು ನೀಡುವ ಸುಸಂಧಿಯೇ ಇದಕ್ಕೆ ಕಾರಣವಂತೆ.

ಅಮರಯ್ಯಾ ಪತ್ರಿಮಠ, ಸುರಪುರ
ಸ್ವರ್ಗನರಕಗಳು ಎಲ್ಲಿವೆ?
ಕೈಯಲ್ಲೇ. ಕೈಗೂಡಿಸಿದರೆ ಸ್ವರ್ಗ; ಕೈ ಚಾಚಿದರೆ ನರಕ.

ಕೆ.ಬಿ. ಬಸಪ್ಪ, ಬೇಲೂರು
ಇತ್ತೀಚೆಗೆ ಅಡವಿಟ್ಟ ಚಿನ್ನವನ್ನು ಕೊಳ್ಳುವ ಕಂಪನಿಗಳು ಜಾಸ್ತಿಯಾಗುತ್ತಿವೆ. ಏಕೆ?
ದುರ್ಬಲ ಮೂಲದ ಮೇಲೆ ನರಿಗಳು ಎರಗುವುದು ಪ್ರಕೃತಿ ನಿಯಮ.

ವಿ. ಹಮೀದ್, ವಿಟ್ಲ
ಗರ್ಲ್‌ಫ್ರೆಂಡ್‌ನ ಮುತ್ತಿಗೂ, ಪತ್ನಿಯ ಮುತ್ತಿಗೂ ಇರುವ ವ್ಯತ್ಯಾಸವೇನು?
ಅದು ಅಪಿಟೈಸರ್; ಇದು ಫುಲ್ ಮೀಲ್ಸ್.

ಕಾವ್ಯಶ್ರೀ ಪತ್ರಿಮಠ, ಸುರಪುರ
ಬಾಳು ಬಂಗಾರ ಆಗುವುದು ಯಾವಾಗ?
ಜೀವನದ ಅದುರಿನಿಂದ ಅನುಭವದ ಲೋಹವನ್ನು ಹೆಕ್ಕಿ ವಿವೇಕದ ಒರೆಗೆ ಹಚ್ಚಿದಾಗ.

ರಾಜೀವ್ ಕುಮಾರ್, ದಾವಣಗೆರೆ
ಕೊರೊನ ಹಾಗೂ ರೂಪಾಂತರ ಕೊರೋನ; ಇವುಗಳ ವ್ಯತ್ಯಾಸವೇನು?
ಮೇಕಪ್‌ಗೆ ಮುಂಚಿನ ಮತ್ತು ನಂತರದ ಬೆಡಗಿಯಷ್ಟೇ.

ರಮಾನಂದ ರೆಡ್ಡಿ, ಮದಕರಿಪುರ
ಒಳಿತು ಮಾಡು ಮನುಜ ನೀನಿರುವುದು ಮೂರು ದಿವಸ; ಇದು ಗೊತ್ತಿದ್ದೂ ಕೇಡು ಬಯಸುವರಿದ್ದಾರಲ್ಲಾ?
'ಮದ್ಯ ಹಾನಿಕರ' ಎಂದರೂ ಕುಡಿದು ಸಾಯುವ ಸ್ವನಾಶಿಗಳಿರುವಾಗ ಪರರಿಗೆ ಕೇಡೆಣಿಸುವುದೇನು ಮಹಾ!

ರಾಜೀವ ಎನ್. ಮಾಗಲ್, ಸಕಲೇಶಪುರ
ಜೊತೆಯಲ್ಲಿ ಸಂಸಾರ ಮಾಡುತ್ತಿರುವ ಸತಿಯನ್ನೇ 'ಶನಿ...ಶನಿ' ಎನ್ನುವ ಪತಿದೇವನ ಮನದಲ್ಲೇನಿರಬಹುದು?
ಕೀಳು ಸಂಸ್ಕೃತಿ.

## ಬಹುಮಾನಿತ ಪ್ರಶ್ನೆ

ಫಾಲನೇತ್ರ ಸಜ್ಜನ, ಶಿರಸಿ
ಗಿಣಿರಾಮ ಎಂದಂತೆ ಗಿಣಿಸೀತೆ ಎಂದೇಕೆ ಅನ್ನುವುದಿಲ್ಲ?
ಹೆಣ್ಣು ಅರ್ಧಾಂಗಿಯಲ್ಲವೇ... ರಾಮ ಗಿಣಿಯಾದರೆ ಸೀತೆ ಅರಗಿಣಿ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ
ಏನಾದರೂ ಮಾಡಿ ಹಿಂದುಳಿಯಲೇಬೇಕು. ಕಾವಿ ತೊಟ್ಟು ನನಗೆ ಸಾಥ್ ಕೊಡ್ತೀಯಾ ರಾಮಣ್ಣಾ?
ಛಿ! ನನ್ನನ್ನೇನು ಜಾತಿನಿಷ್ಠ ಸಮಾಜಭ್ರಷ್ಟ ಸ್ವಾಮೀಜಿ ಎಂದುಕೊಂಡೆಯೇನು?

ಅಭಿಷೇಕ ರ. ಬೊಂಗಾಳೆ, ಬೈಲಹೊಂಗಲ
ಗ್ರಂಥಾಲಯಕ್ಕೂ, ಪೂಜಾರಿಗೂ ಏನು ವ್ಯತ್ಯಾಸ?
ಅಲ್ಲಿ ಜ್ಞಾನ ಸಂಪುಟ; ಇವರದು ಧ್ಯಾನ ಸಂಪುಟ.

ರವಿಕಾಂತ ಎಂ.ಕೆ., ತುಮಕೂರು
ಗರುಡ ಪಕ್ಷಿರಾಜ; ಸಿಂಹ ಕಾಡಿನ ರಾಜ; ರಾಜಾಹುಲಿ ನಾಡಿನ ದೊರೆ. ಈ ಹೆಸರುಗಳನ್ನು ಇಟ್ಟದ್ದು ಯಾರು?



ಹೊಗಳುಭಟ್ಟರು.

ಬಾ.ರಂ. ಸುರೇಶ್, ಶಿವಮೊಗ್ಗ
ನನ್ನ ತಪಸ್ಸನ್ನು ಸುಂದರ ಹುಡುಗಿಯರು ಕೆಡಿಸಿದ್ದಾರೆ. ಈಗ ತಪವನ್ನು ಎಲ್ಲಿ, ಹೇಗೆ ಮುಂದುವರಿಸಲಿ?
ಮಹಾರಾಣೀಸ್ ಕಾಲೇಜ್ ಮುಂದೆ ಯತ್ನಿಸಿ. ಫಲಿಸಿದರೆ ವರ; ಫಲಿಸದಿದ್ದರೆ ವಧು!

ಸುಬ್ಬಣ್ಣ, ಬೆಂಗಳೂರು
ಅತ್ಯಾಚಾರಿ, ಕಳ್ಳ, ಕೊಲೆಗಡುಕರನ್ನು ನ್ಯಾಯಾಲಯಕ್ಕೆ ಒಯ್ಯುವಾಗ ಅವರ ಮುಖ ಮುಚ್ಚುವುದೇಕೆ?
ಅಂತಹವರೇ ಮುಂದೆ ಕ್ರಮವಾಗಿ ಮಹಿಳಾ ಕಲ್ಯಾಣ, ಗೃಹ, ರಕ್ಷಣಾ ಮಂತ್ರಿ ಆಗುವ ಸಾಧ್ಯತೆ ಇರುವುದರಿಂದ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in